# ಕ್ಯಾಮೆರಾ ಮನೆ

■ ಎಂ. ಮಹೇಶ




ಬೆಳಗಾವಿಯ ಶಾಸ್ತ್ರಿನಗರದ 5ನೇ ಕ್ರಾಸ್‌ನಲ್ಲೊಂದು ಮನೆ ಇದೆ. ಅದು ಥೇಟ್ ಕ್ಯಾಮೆರಾ ರೀತಿಯಲ್ಲಿದೆ. ಆ ವಿಶೇಷವಾದ ಮನೆ ರಸ್ತೆಯಲ್ಲಿ ಹಾದು ಹೋಗುವವರನ್ನೆಲ್ಲಾ ತನ್ನತ್ತ ತಿರುಗಿ ನೋಡುವಂತೆ ಮಾಡುತ್ತಿದೆ.

ವೃತ್ತಿಪರ ಛಾಯಾಗ್ರಾಹಕರಾದ ರವಿ ಹೊಂಗಲ್ ಅವರ ಮನೆ ಇದು. ಫೋಟೊಗ್ರಫಿ ಮೇಲಿನ ಪ್ರೀತಿಯಿಂದಾಗಿ ಅವರು ತಮ್ಮ ಮನೆಯನ್ನು ಕ್ಯಾಮೆರಾದಂತೆ ವಿನ್ಯಾಸ ಮಾಡಿಸಿಕೊಂಡಿದ್ದಾರೆ. ಮನೆಯ ಹೊರಾವರಣ ಹಾಗೂ ಒಳಾವರಣವನ್ನು ಕ್ಯಾಮೆರಾದಲ್ಲಿ ಬಳಕೆಯಾಗುವ ವಸ್ತುಗಳನ್ನು ಬಿಂಬಿಸುವಂತೆ ಕಟ್ಟಿಸಿದ್ದಾರೆ.

ಲೆನ್ಸ್, ಫ್ಲಾಶ್, ಮೆಮೋರಿ ಕಾರ್ಡ್, ಹಿಂದಿನ ಕಾಲದಲ್ಲಿ ಫೋಟೊ ತೆಗೆಯಲು ಬಳಕೆಯಾಗುತ್ತಿದ್ದ ಫಿಲ್ಮ್ ರೀಲುಗಳು – ಇವೆಲ್ಲವನ್ನೂ ಮನೆ ಬಿಂಬಿಸುತ್ತಿದೆ. ತಿಂಗಳ ಹಿಂದೆಯಷ್ಟೇ ಈ ಕ್ಯಾಮೆರಾ ಮನೆ ನಿರ್ಮಾಣಗೊಂಡಿದ್ದು, ಸಾರ್ವಜನಿಕರು ಅಚ್ಚರಿಯಿಂದ ನೋಡುತ್ತಿದ್ದಾರೆ. ಮನೆಯ ಮೇಲ್ಭಾಗದಲ್ಲಿ ‘ಕ್ಲಿಕ್’ ಎಂದು ಇಂಗ್ಲಿಷ್‌ನಲ್ಲಿ ಬರೆಸಿದ್ದಾರೆ. ಬಾಲ್ಕನಿಯಲ್ಲಿನ ಗಾಜುಗಳು ಲೆನ್ಸಿನಂತೆ ಕಾಣುತ್ತವೆ. ಕಿಟಕಿಗಳ ಗ್ರಿಲ್‌ಗಳಿಗೆ ಕ್ಯಾಮೆರಾ, ಮನೆಯೊಳಗೆ ಅಲ್ಲಲ್ಲಿ ಪೆನ್ ಡ್ರೈವ್, ಪ್ರಿಂಟರ್, ಲೆನ್ಸ್, ಫ್ಲಾಶ್ ಮೊದಲಾದ ಪ್ರತಿಕೃತಿಗಳನ್ನು ಅಳವಡಿಸಲಾಗಿದೆ.

**ಛಾಯಾಗ್ರಹಣದ ಬಗೆಗಿನ ಪ್ರೀತಿಯಿಂದ ಮನೆಗೆ ಕ್ಯಾಮೆರಾ ರೂಪ, ಮಕ್ಕಳಿಗೆ ಕ್ಯಾಮೆರಾ ಕಂಪನಿಗಳ ಹೆಸರು!**

## ಛಾಯಾಗ್ರಹಣದ ಪ್ರೀತಿ

ರವಿ ಅವರು ತಮ್ಮ ಮೂವರು ಗಂಡು ಮಕ್ಕಳಿಗೆ ಕ್ರಮವಾಗಿ ‘ಕೆನಾನ್’, ‘ನಿಕಾನ್’ ಹಾಗೂ ‘ಎಪ್ಸಾನ್’ ಎಂದು ಕ್ಯಾಮೆರಾ ಕಂಪನಿಗಳ ಹೆಸರುಗಳನ್ನು ನಾಮಕರಣ ಮಾಡಿದ್ದಾರೆ. ಮಗಳು ಹುಟ್ಟಿದ್ದರೆ ‘ಸೋನಿ’ ಎನ್ನುವ ಹೆಸರಿಡಬೇಕೆನ್ನುವ ಯೋಚನೆಯೂ ಅವರಿಗಿತ್ತಂತೆ.

ಎಪಿಎಂ ರಸ್ತೆಯಲ್ಲಿ ರಾಣಿ ಡಿಜಿಟಲ್ ಸ್ಟುಡಿಯೊ ಹೊಂದಿರುವ ಅವರು, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮೊದಲಾದ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಫೋಟೊ ತೆಗೆದುಕೊಡುವ ಮೂಲಕ ಸೇವಾ ಕಾರ್ಯದಲ್ಲೂ ತೊಡಗಿದ್ದಾರೆ. ಅಂಗವಿಕಲರು, ಯೋಧರಿಗೆ ಉಚಿತವಾಗಿ ಫೋಟೊ ತೆಗೆದುಕೊಡುವ ಕೆಲಸವನ್ನು ಆಗಾಗ ಮಾಡುತ್ತಿರುತ್ತಾರೆ.

‘ಕಾಲೇಜು ಮೆಟ್ಟಿಲು ಹತ್ತುವ ವೇಳೆಗೆ ಫೋಟೊಗ್ರಫಿಯ ಸೆಳೆತ ಹೆಚ್ಚಾಯಿತು. ಹಾಗಾಗಿ ಫೋಟೊಗ್ರಫಿಯನ್ನೇ ವೃತ್ತಿ ಮಾಡಿಕೊಂಡೆ. ಹಳ್ಳಿಹಳ್ಳಿಗಳಿಗೆ ಹೋಗಿ ನಾಟಕಗಳ ಫೋಟೊಗಳನ್ನು ತೆಗೆದಿದ್ದೇನೆ. ಕ್ರಮೇಣ ಸ್ಟುಡಿಯೊ ಮಾಡಿದೆ. ’ ಎಂದು ರವಿ ತಾವು ಸಾಗಿಬಂದಿರುವ ದಾರಿಯನ್ನು ನೆನಪಿಸಿಕೊಳ್ಳುತ್ತಾರೆ.

‘ಛಾಯಾಗ್ರಾಹಕನಾದ ನನಗೆ ಕ್ಯಾಮೆರಾನೇ ದೇವರು. ಅದರಿಂದಾಗಿಯೇ ಮುಂದೆ ಬಂದಿದ್ದೇನೆ. ಹೀಗಾಗಿ, ಮನೆಯನ್ನು ಕ್ಯಾಮೆರಾದಂತೆ ಕಾಣುವಂತೆ ನಿರ್ಮಿಸಿದ್ದೇನೆ’ ಎನ್ನುತ್ತಾರೆ. ‘ಆತ್ಮತೃಪ್ತಿಗಾಗಿ ಮನೆಯನ್ನು ಹೀಗೆ ನಿರ್ಮಿಸಿಕೊಂಡಿದ್ದೇನೆ. ನನ್ನ ಕಲ್ಪನೆಯ ಪ್ರಕಾರ ಎಂಜಿನಿಯರ್ ಮನೆಯನ್ನು ಕಟ್ಟಿಕೊಟ್ಟಿದ್ದಾರೆ. ನನ್ನ ಮನೆ ಎಲ್ಲರ ಗಮನ ಸೆಳೆಯುತ್ತಿದೆ. ಬಹಳ ಮಂದಿ ಬಂದು ಸೆಲ್ಫಿ ತಗೊತಾರೆ. ವಿನ್ಯಾಸದ ವಿವರಗಳನ್ನು ವಿಚಾರಿಸುತ್ತಾರೆ, ಮನೆ ನೋಡಿ ಖುಷಿಪಡುತ್ತಾರೆ’ ಎಂದು ಖುಷಿಯಿಂದಲೇ ಹೇಳಿಕೊಂಡರು.

ರವಿ ಅವರ ಪತ್ನಿ ಕೂಡ ಛಾಯಾಗ್ರಹಣ ಮಾಡುತ್ತಾರೆ. ತಮ್ಮ ಪುತ್ರ ನಿಕಾನ್‌ನನ್ನು ಇದೇ ವೃತ್ತಿಗೆ ಸಜ್ಜುಗೊಳಿಸುವ ಉದ್ದೇಶ ಅವರದು. ■

